ಹಾಸನ ರೈಲ್ವೆ ಮಾರ್ಗದ ಕಾಮಗಾರಿಗಳು

130(327) **ಶ್ರೀ ಚಲುವರಾಯಸ್ವಾಮಿ ಎನ್.** (ನಾಗಮಂಗಲ):– ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು ಮತ್ತು ಮೈಸೂರು ನಡುವಿನ ಬ್ರಾಡ್ ಗೇಜ್ ದ್ವಿಪಥ ರೈಲು ಮಾರ್ಗ ಯೋಜನೆ ಯಾವ ಹಂತದಲ್ಲಿದೆ : ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳು ಯಾವಾಗ ಮುಕ್ತಾಯಗೊಳ್ಳುವ ಸೂಚನೆಗಳಿವೆ ; ಈ ಕಾಮಗಾರಿಗಳನ್ನು ಬೇಗ ಮುಕ್ತಾಯಗೊಳಿಸಿ, ರೈಲು ಓಡಾಟ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ರೈಲ್ವೆ ಸಚಿವಾಲಯಕ್ಕೆ ಮನವಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ: ರಾಜ್ಯ ಸರ್ಕಾರದ ಪಾಲಿನ ಹಣವನ್ನು ಈ ಯೋಜನೆಗೆ ಒದಗಿಸಲಾಗಿದೆಯೇ; ಹಾಗಿದ್ದಲ್ಲಿ, ಇನ್ನೂ ಒದಗಿಸಬೇಕಾಗಿರುವ ಹಣ ಎಷ್ಟು :

ಆ) ಕೆಂಗೇರಿ – ಕನಕಪುರ – ಮಳವಳ್ಳಿ– ಚಾಮರಾಜನಗರ ರೈಲು ಮಾರ್ಗದ ಸರ್ವೇ ಕಾರ್ಯ ಆಗಿದೆಯೇ; ಈ ಯೋಜನೆಯ ರೂಪುರೇಷೆಗಳೇನು; ಸರ್ವೇ ಕಾರ್ಯ ಆಗದಿದ್ದಲ್ಲಿ, ಈ ಬಗ್ಗೆ ಚಾಲನೆ ಮಾಡಲು ಕೇಂದ್ರ ರೈಲ್ವೆ ಸಚಿವಾಲಯಕ್ಕೆ ಮನವಿ ಮಾಡಲು ಕ್ರಮ ತೆಗೆದುಕೊಳ್ಳಲಾವುದೇ :

ಇ) ಬೆಂಗಳೂರು – ನೆಲಮಂಗಲ – ಕುಣಿಗಲ್ –ಬೆಳ್ಳೂರು ಕ್ರಾಸ್–ಶ್ರವಣಬೆಳಗೊಳ ಮಾರ್ಗದ ಬ್ರಾಡ್ ಗೇಜ್ ರೈಲವೆ ಮಾರ್ಗ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ ; ಎಷ್ಟು ಕಾಮಗಾರಿ ಪೂರ್ಣಗೊಂಡಿದೆ: ಆಗಬೇಕಾಗಿರುವ ಕಾಮಗಾರಿಗಳು ಯಾವುವು: ಈ ಕಾಮಗಾರಿ ಯಾವಾಫ ಮುಕ್ತಾಯಗೊಳ್ಳಲಿದೆ: ರಾಜ್ಯ ಸರ್ಕಾರದ ಪಾಲಿನ ಹಣವನ್ನು ಈ ಯೋಜನೆಗೆ ಒದಗಿಸಲಾಗಿದೆಯೇ; (ವಿವರ ಒದಗಿಸುವುದು) ?

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು) :–

ಅ) ಬೆಂಗಳೂರು ಮತ್ತು ಮೈಸೂರು ದ್ವಿಪಥ ರೈಲು ಮಾರ್ಗ ಯೋಜನೆ ಪ್ರಗತಿಯಲ್ಲಿದೆ ಬೆಂಗಳೂರು–ರಾಮನಗರ ವಿಭಾಗವನ್ನು ಮುಕ್ತಾಯಗೊಳಿಸಿ ಸಂಚಾರಕ್ಕೆ ತೆರವುಗೊಳಿಸಲಾಗಿದೆ. ರಾಮನಗರ–ಮೈಸೂರು ವಿಭಾಗದಲ್ಲಿ ಒಟ್ಟು 93. ಕೀ.ಮೀ ಗಳಲ್ಲಿ ಮಾರ್ಚ್ 2014ರವರೆಗೆ 46 ಕಿ.ಮೀ. ಮಾರ್ಗವನ್ನು ಸಂಚಾರಕ್ಕೆ

ತೆರವುಗೊಳಿಸಲಾಗಿದೆ. ಈ ಮಾರ್ಗದ ಕಾಮಗಾರಿಯನ್ನು ಮಾರ್ಚ್ 2015 ಕ್ಕೆ ಮುಕ್ತಾಯಗೊಳಿಸುವ ಗುರಿ ಹೊಂದಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿರುತ್ತದೆ. ರೈಲು ಯೋಜನೆಗಳಿಗೆ ಆದ್ಯತೆಯನ್ನು ನಿಗದಿಗೊಳಿಸುವ ಬಗ್ಗೆ ಕ್ರಮವಹಿಸಲಾಗುತ್ತಿದೆ. ರಾಜ್ಯ ಸರ್ಕಾರದ ಪಾಲನ ರೂ. 503.98 ಕೋಟಿಗಳಲ್ಲಿ ಇದೂವರೆವಿಗೂ ರೂ. 389.14 ಕೋಟಿಗಳನು ಬಿಡುಡಗೆ ಮಾಡಲಾಗಿದ್ದು. ಬಾಕಿ ಒದಗಿಸಬೇಕಾಗಿರುವ ಅನುದಾನ ರೂ. 114.00 ಕೋಟಿಗಳು.

ಆ) ಈ ಮಾರ್ಗದ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಈ ಮಾರ್ಗವು 162 ಕಿ.ಮೀ. ಗಳಾಗಿದ್ದು. ಯೋಜನೆಯ ಅಂದಾಜು ವೆಚ್ಚ ರೂ. 1254.71 ಕೋಟಿಗಳಾಗಿರುತ್ತದೆ. ಈ ಯೋಜನೆಯ ವೆಚ್ಚವನ್ನು ಶೇ. 50:50 ವೆಚ್ಚ ಹಂಚಿಕೆ ಆಧಾರದಡಿ ಭರಿಸಲು ಹಾಗೂ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಉಚಿತವಾಗಿ ಒದಗಿಸಲು ಅನುಮೋದನೆ ನೀಡಲಾಗಿದೆ.

ಇ) ಈ ಮಾರ್ಗದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟು 196 ಕಿ.ಮೀ. ಮಾರ್ಗದಲ್ಲಿ 106 ಕಿ.ಮೀ. ಮಾರ್ಗದ ಕಾಮಗಾರಿ ಮುಕ್ತಾಯಗೊಂಡಿದ್ದು, ಸಂಚಾರಕ್ಕೆ ತೆರವುಗೊಳಿಸಲಾಗಿದೆ. ಉಳಿದ 60 ಕಿ.ಮೀ. ಮಾರ್ಗದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಈ ಕಾಮಗಾರಿಯನ್ನು 2015–16ನೇ ಸಾಲಿನಲ್ಲಿ ಮುಕ್ತಾಯಗೊಳಿಸುವ ಗುರಿ ಹೊಂದಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿರುತ್ತದೆ. ರಾಜ್ಯ ಸರ್ಕಾರದ ಪಾಲಿನ ಒಟ್ಟು ರೂ. 467.21 ಕೋಟಿಗಳಲ್ಲಿ ಇದುವರೆವಿಗೆ 275.17 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.

ಕುಡಿಯುವ ನೀರಿನ ಅಭಾವ

131(359) ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:

(ಅ) ಮಂಡ್ಯ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿದೆ; ತಾಲ್ಲೂಕುವಾರು ವಿವರ ಒದಗಿಸುವುದು;

(ಆ) ಕುಡಿಯುವ ನೀರಿನ ಅಭಾವವನ್ನು ತಾತ್ಕಾಲಿಕವಾಗಿ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು ಕಳೆದ ಮೂರು ತಿಂಗಳಲ್ಲಿ ಇದಕ್ಕೆ ಮಾಡಿರುವ ವೆಚ್ಚ ಎಷ್ಟು ; (ವಿವರ ನೀಡುವುದು)